ನಿಮ್ಮೊಡನೆ

# ಸೈನಿಕರ ಆತ್ಮಹತ್ಯೆ ಏಕೆ ಹೆಚ್ಚುತ್ತಿದೆ?

ಗಡಿಯ ಘರ್ಷಣೆಗಳಲ್ಲಿ ಸಾಯುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಸೈನಿಕರು ಆತ್ಮಹತ್ಯೆ ಮತ್ತು ಅಪಘಾತಗಳಲ್ಲಿ ಸಾಯುತ್ತಿದ್ದಾರೆ. ಇದಕ್ಕೇನು ಪರಿಹಾರ?

ಯುದ್ಧಕ್ಕೆ ಹೋಗದೆಯೂ ಪ್ರತಿವರ್ಷ ಸರಾಸರಿ 1600 ಮಂದಿ ಸಿಬ್ಬಂದಿಯನ್ನು ಭಾರತೀಯ ಸೇನೆ ಕಳೆದುಕೊಳ್ಳುತ್ತಿದೆ. ಇದರಲ್ಲಿ ಅತಿ ಹೆಚ್ಚು ಸಾವುಗಳಾಗುತ್ತಿರುವುದು ಅಪಘಾತಗಳು ಮತ್ತು ಆತ್ಮಹತ್ಯೆಗಳಿಂದ! 2014ರಿಂದೀಚೆಗೆ ಭಾರತೀಯ ಸೇನೆಯ ಮೂರೂ ವಿಭಾಗಗಳಲ್ಲಿ ಒಟ್ಟು ಈ ರೀತಿ 6500ಕ್ಕೂ ಹೆಚ್ಚು ಸಿಬ್ಬಂದಿ ಸಾವಿಗೀಡಾಗಿದ್ದಾರೆ ಎನ್ನುವುದು ವರ್ಷದ ಕೊನೆಗೆ ಬಂದಿರುವ ಸುದ್ದಿ. ಗಡಿ ಘರ್ಷಣೆಯಲ್ಲಿ ಸಾಯುವುದಕ್ಕಿಂತ ಅಪಘಾತದಲ್ಲಿ ಮತ್ತು ಆತ್ಮಹತ್ಯೆಯ ಮೂಲಕ ಸಾಯುತ್ತಿರುವ ಸೈನಿಕರ ಸಂಖ್ಯೆ ಹೆಚ್ಚಿದೆ. ಪ್ರತಿವರ್ಷ ಸರಾಸರಿ 350 ಮಂದಿ ಸೈನಿಕರು ಅಪಘಾತಗಳಲ್ಲಿ ಸತ್ತಿದ್ದರೆ, ಸರಾಸರಿ 120ರಷ್ಟು ಸೈನಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸೈನಿಕರ ಆತ್ಮಹತ್ಯೆಯ ಬಗ್ಗೆ ಯಾವತ್ತೂ ಸೇನೆಯ ಸಮವಸ್ತ್ರ ಧರಿಸದವರು ಆರಾಮಕುರ್ಚಿಯಲ್ಲಿ ಕುಳಿತು ಪ್ರತಿಕ್ರಿಯೆ ನೀಡುವುದು ಸುಲಭ. ಆದರೆ ಈ ಎಚ್ಚರವನ್ನು ಇಟ್ಟುಕೊಂಡೇ ಸೈನಿಕರ ಹೆಚ್ಚುತ್ತಿರುವ ಆತ್ಮಹತ್ಯೆಯ ಪ್ರವೃತ್ತಿಯ ಬಗ್ಗೆ ಚರ್ಚಿಸಬೇಕಿದೆ. ನಮ್ಮ ಸೈನಿಕರ ಆತ್ಮಹತ್ಯೆಗೆ ಹಲವು ಕಾರಣಗಳಿವೆ. ಮನೆಯಿಂದ ಬಹುಕಾಲ ದೂರ ಇರುವುದು, ಕೆಲಸದ ಅತೀವ ಒತ್ತಡ, ಗಡಿಪ್ರದೇಶಗಳ ಉದ್ರಿಕ್ತ ಸ್ಥಿತಿ– ಹೀಗೆ ಕೆಲವು ಕಾರಣಗಳನ್ನು ಪಟ್ಟಿ ಮಾಡಬಹುದು. ಅದರಲ್ಲೂ ಮನೆಯಿಂದ ವರ್ಷಗಟ್ಟಳೆ ದೂರ ಇರುವ ಸೈನಿಕರು ತಮ್ಮ ಮನೆಗಳಲ್ಲಿ ಉಂಟಾಗುವ ಕೌಟುಂಬಿಕ ಸಮಸ್ಯೆಗಳನ್ನು ಅಲ್ಲಿಂದಲೇ ನಿರ್ವಹಿಸಲಾಗದೆ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಾರೆ. ಸಾಮಾನ್ಯವಾಗಿ ಯೌವನದಲ್ಲಿ ಸೇನೆಗೆ ಸೇರುವ ಸೈನಿಕರು ದೂರದ ಊರಲ್ಲಿ ವಯಸ್ಸಾದ ತಂದೆ– ತಾಯಿಗಳ ಬಗ್ಗೆ ಹೆಚ್ಚು ಚಿಂತೆ ಹೊಂದಿರುತ್ತಾರೆ. ಜತೆಗೆ ಸೋದರರ ಮಧ್ಯೆ ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ಕಲಹಗಳೂ ಅವರ ನೆಮ್ಮದಿಯನ್ನು ಹಾಳು ಮಾಡುತ್ತವೆ. ಮದುವೆಯಾದ ಬಳಿಕ ಈ ಸಮಸ್ಯೆಗಳು ಬೇರೆಯೇ ಸ್ವರೂಪ ತಾಳುತ್ತವೆ. ಮದುವೆಯಾಗಿ ಮನೆಗೆ ಬಂದ ಮಡದಿ, ತಂದೆ ತಾಯಿಯ ಜತೆಗೆ ಹೊಂದಿಕೊಂಡು ಹೋಗುವಂತೆ ದೂರದಿಂದಲೇ ನೋಡಿಕೊಳ್ಳಬೇಕಾದ ಪರಿಸ್ಥಿತಿ. ಮಕ್ಕಳಾದ ಬಳಿಕ ಅವರ ಶಿಕ್ಷಣ, ವ್ಯಕ್ತಿತ್ವ ವಿಕಸನ ಮುಂತಾದ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಈ ಕಾರಣದಿಂದಲೇ ಸೇನೆಯಿಂದ ಸ್ವಯಂನಿವೃತ್ತಿ ಪಡೆಯುವವರ ಸಂಖ್ಯೆಯೂ ಹೆಚ್ಚಾಗುತ್ತಿರುವುದು ಗಮನಾರ್ಹ.

ಸೇನೆಗೆ ಸೇರುವ ಮುನ್ನ ಮಾನಸಿಕ ದೃಢತೆಯ ಪರೀಕ್ಷೆಯನ್ನು ಅಧಿಕಾರಿಗಳಿಗೆ ಮಾತ್ರ ನಡೆಸುತ್ತಾರೆ, ಸೈನಿಕರಿಗೆ ಇಂತಹ ಪರೀಕ್ಷೆಗಳು ನಡೆಯುವುದಿಲ್ಲ. ಅವರಿಗೂ ಈ ರೀತಿಯ ಪರೀಕ್ಷೆಗಳನ್ನು ಮಾಡಬೇಕಾದ ಅನಿವಾರ್ಯತೆ ಇದೆಯೆ ಎನ್ನುವುದರ ಬಗ್ಗೆ ಆಲೋಚಿಸಬೇಕಿದೆ. 11.73 ಲಕ್ಷ ಸಿಬ್ಬಂದಿ ಇರುವ ಬೃಹತ್ ಸಂಸ್ಥೆ ನಮ್ಮ ಸೇನಾಪಡೆ. ಇಷ್ಟು ದೊಡ್ಡ ಸಿಬ್ಬಂದಿಯ ಆಡಳಿತ ನಿರ್ವಹಣೆ ಮಾಡುವಾಗ ಅಧಿಕಾರಿಗಳು ವಹಿಸಬೇಕಾದ ಮಾನವೀಯ ಎಚ್ಚರಗಳ ಬಗ್ಗೆ ಆಡಳಿತದ ಒಳಗೆಯೇ  ಚರ್ಚೆ ನಡೆಯುತ್ತಿದೆಯೆ? ದೈಹಿಕ ಒತ್ತಡಗಳನ್ನು ಎದುರಿಸುವ ಬಗ್ಗೆ ತರಬೇತಿ ನೀಡುವುದು ಸುಲಭ. ಆದರೆ ಸೈನಿಕರ ಮಾನಸಿಕ ಒತ್ತಡಗಳ ನಿರ್ವಹಣೆಯ ಬಗ್ಗೆ ಪ್ರತಿಯೊಬ್ಬರ ವೈಯಕ್ತಿಕ ಬದುಕಿನ ಸಮಸ್ಯೆಗಳನ್ನು ತಿಳಿದುಕೊಂಡು ಕೌನ್ಸಿಲಿಂಗ್ ಮಾಡಬೇಕಾಗುತ್ತದೆ. ಅಷ್ಟೊಂದು ವ್ಯವಧಾನ ಮತ್ತು ಸಮಯ ಅಧಿಕಾರಿಗಳಲ್ಲಿ ಇದೆಯೆ ಎನ್ನುವುದು ಪ್ರಶ್ನೆ.

ಸೈನಿಕರ ಆತ್ಮಹತ್ಯೆಯ ಪ್ರವೃತ್ತಿ ಭಾರತಕ್ಕೇ ವಿಶಿಷ್ಟವಾದ ಸಮಸ್ಯೆ ಅಲ್ಲ. ಅಮೆರಿಕದ ಸೇನೆಯಲ್ಲಿ 2004ರ ಇರಾಕ್ ಆಕ್ರಮಣದ ಬಳಿಕ ಆತ್ಮಹತ್ಯೆಯ ಪ್ರವೃತ್ತಿ ಹೆಚ್ಚಿದೆ ಎನ್ನಲಾಗಿದೆ. 2012ರ ಬಳಿಕ ಅಮೆರಿಕ ಸೇನೆಯಲ್ಲಿ ಆತ್ಮಹತ್ಯೆಯ ಸಂಖ್ಯೆ, ನಾಗರಿಕರ ಆತ್ಮಹತ್ಯೆಯ ಪ್ರಮಾಣಕ್ಕಿಂತ ಶೇಕಡಾ 25ರಷ್ಟು ಹೆಚ್ಚಿದೆ ಎಂದೂ ವರದಿಗಳು ತಿಳಿಸಿವೆ. ಬ್ರಿಟನ್ನಿನಲ್ಲಿ ಅತ್ಯಂತ ಸಣ್ಣ ಸೇನೆ ಇದ್ದರೂ ಪ್ರತಿ ಎರಡು ವಾರಕ್ಕೆ ಸರಾಸರಿ ಒಬ್ಬರಂತೆ ಸೈನಿಕರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದರೆ ಈ ಅಂಕಿ ಸಂಖ್ಯೆಗಳನ್ನು ಮುಂದಿಟ್ಟುಕೊಂಡು ಭಾರತೀಯ ಸೈನಿಕರ ಆತ್ಮಹತ್ಯೆ ಪ್ರಮಾಣ ಹೆಚ್ಚುವುದನ್ನು ನಿರ್ಲಕ್ಷಿಸಲಾಗದು. ಈ ಕುರಿತು ಸೇನೆಯ ಹೊರಗೂ ಚರ್ಚೆ ನಡೆದರೆ ತಪ್ಪೇನಿಲ್ಲ. ಸೈನಿಕ ಕುಟುಂಬಗಳ ಸದಸ್ಯರು ಮತ್ತು ನಾಗರಿಕ ಸಮಾಜವೂ ಸೈನಿಕರ ಇಂತಹ ಮನೋಪ್ರವೃತ್ತಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸುವ ಅಗತ್ಯವಿದೆ. ಕೋಟ್ಯಂತರ ಭಾರತೀಯರ ನೆಮ್ಮದಿಯ ನಿದ್ರೆ ಮತ್ತು ಸುರಕ್ಷಿತ ಬದುಕಿನ ಸಲುವಾಗಿ ಜೀವ ತೇಯುವ ನಮ್ಮ ಸೈನಿಕರ ಬದುಕು ಹಸನಾಗಿಸಲು ಎಲ್ಲ ಭಾರತೀಯರೂ ಚಿಂತಿಸಬೇಕಿದೆ.

■ ಬಿ.ಎಂ.ಹನೀಫ್



ಈಶ್ವರ್